ದಿನಾಂಕಃ 25-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 1 ರಿಂದ 8 ಮತ್ತು 10 ರಿಂದ 16 ನೇ ಪ್ರತಿವಾದಿಗಳ ಪರವಾಗಿ ಶ್ರೀ.ಎಂ.ಎನ್.ಬಿ. ವಕೀಲರಿಂದಃ-**

ನಾನು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಹಿಸ್ಸೆಗಾಗಿ ಸಲ್ಲಿಸಿರುತ್ತೇನೆ. ನನ್ನ ತಾತ ಬಿ.ಚೌಡಪ್ಪನವರು ಎಷ್ಟು ವರ್ಷಗಳ ಹಿಂದೆ ಮೃತಪಟ್ಟರು ಎಂಬುದು ನನಗೆ ಗೊತ್ತಿಲ್ಲ. ಬಿ.ಚೌಡಪ್ಪರವರಿಗೆ ಕೊಂಡಪ್ಪ, ವೆಂಕಟಯ್ಯ, ರಾಮಯ್ಯ ಮತ್ತು ಹನಮಂತಪ್ಪ ಎಂಬ ಮಕ್ಕಳುಗಳಿದ್ದರು. ಬಿ.ಚೌಡಪ್ಪರವರು ಬದುಕಿದ್ದಾಗಲೇ ಅವರ ಕುಟುಂಬದ ಎಲ್ಲಾ ಆಸ್ತಿಗಳನ್ನು ಹಿಸ್ಸೆ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಬಿ.ಚೌಡಪ್ಪರವರ ಮಗ ಕೊಂಡಪ್ಪನಿಗೆ ಚೌಡಪ್ಪ ಮತ್ತು ತಿಮ್ಮಪ್ಪ ಎಂಬ ಇಬ್ಬರು ಮಕ್ಕಳುಗಳಿದ್ದರು. ದಾವಾ ಆಸ್ತಿಗಳು ಕೊಂಡಪ್ಪನ ಮಗ ಚೌಡಪ್ಪನಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪ್ರತಿವಾದಿ 1 ರಿಂದ 6 ರವರಿಗೆ ಸೇರಿದ ಆಸ್ತಿಗಳಾಗಿದ್ದು, ನಮಗಾಗಲೀ ಅಥವಾ ಉಳಿದ ಪ್ರತಿವಾದಿಯರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಕೊಂಡಪ್ಪನ ಮಕ್ಕಳಾದ ಚೌಡಪ್ಪ ಮತ್ತು ತಿಮ್ಮಪ್ಪನ ಮಕ್ಕಳುಗಳಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಮೇಲೆ ನಮಗಾಗಕಲೀ ಅಥವಾ ಪ್ರತಿವಾದಿ 7 ರಿಂದ 16 ರವರುಗಳಿಗಾಗಲೀ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಎಲ್ಲರೂ ಸಹ ಪ್ರತ್ಯೇಕವಾಗಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ, ಸಾಕ್ಷಿಯು ಜಮೀನುಗಳಲ್ಲಿ ಯಾವುದೇ ಹಿಸ್ಸೆ ಆಗಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಎಲ್ಲಾ

ಪ್ರತಿವಾದಿಯರಿಗೂ ಸಹ ಪ್ರತ್ಯೇಕವಾಗಿ ಪಡಿತರ ಚೀಟಿ ಮತ್ತು ಮತದಾರರ ಚೀಟಿಗಳು ಇವೆ ಎಂದರೆ ಸರಿ.

ನಮ್ಮ ಮತ್ತು ಪ್ರತಿವಾದಿಯರ ನಡುವೆ ಈಗಾಗಲೇ ಹಿಸ್ಸೆ ಆಗಿರುವುದರಿಂದ ಪುನಃ ಹಿಸ್ಸೆ ಕೋರಿ ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಕೊಂಡಪ್ಪನ ಮಕ್ಕಳುಗಳಾದ ಚೌಡಪ್ಪ ಮತ್ತು ತಿಮ್ಮಪ್ಪರವರ ವಾರಸುದಾರರು ದಾವಾ ಆಸ್ತಿಗಳಲ್ಲಿ ಭಾಗ ಮಾಡಿಕೊಂಡು ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದಲ್ಲಿ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಪುನಃ ಹಿಸ್ಸೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಯರ ನಡುವೆ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೊಡುವಂತೆ ಯಾರನ್ನೂ ಕೇಳಿಲ್ಲ ಮತ್ತು ಯಾವುದೇ ಪಂಚಾಯಿತಿ ಮಾಡಿರುವುದಿಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಎಲ್ಲಾ ದಾಖಲೆಗಳು ಕೊಂಡಪ್ಪನ ಮಗ ಚೌಡಪ್ಪನ ಹೆಸರಿನಲ್ಲಿವೆ ಎಂದರೆ ಸರಿ. ಸಾಕ್ಷಿಯು, ಕುಟುಂಬದ ಹಿರಿಯ ಮಗನಾದ ಕಾರಣ ಆತನ ಹೆಸರಿನಲ್ಲಿವೆ ಎಂದು ಸ್ವತಃ ನುಡಿಯುತ್ತಾರೆ. ಕೊಂಡಪ್ಪನ ಮಗ ಚೌಡಪ್ಪ ನಮ್ಮ ಕುಟುಂಬದ ಹಿರಿಯ ಮಗನಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಓಎಸ್.255/2023

ಪಿಡಬ್ಲ್ಯು- 1

ಮತ್ತು ಜೆಎಂಎಫ್‌ಸಿ, ಮಧುಗಿರಿ